ದಿನ ಅಪ್ಪನೇ ಇವಳ ಬಳಿ ಬಂದು ತಲೆ ನೇವರಿಸುತ್ತ ನುಡಿದರು:

'ಸುಜೀ, ನಿನಗೆ ಇನ್ನೂ ಮುಂದಕ್ಕೆ ಓದುವ ಆಶೆ ಇತ್ತಲ್ಲ, ಈಗಲೂ ತಡವಾಗಲಿಲ್ಲ. ಬರೀ ಒಂದು ವರುಷ ತಾನೆ ನಷ್ಟವಾಗಿದೆ. ಕೂಡಲೇ ಒಳ್ಳೇ ಕಾಲೇಜಿಗೆ ಅಪ್ಲೈ ಮಾಡು.'

ಈ ಮಾತು ಸುಜಾತಾಳ ತಲೆಗೆ ನಾಟಿತು. ಮೊದಲ ಬಾರಿಗೆ ಮುಂದಿನ ಓದಿನ ಬಗ್ಗೆ ಯೋಚಿಸಿದಳು. ಶಶಿಕಾಂತನೂ ತನ್ನ ತಲೆ ಮೇಲೆ ಚಪ್ಪಡಿ ಎಳೆದು ಹಾಕಿದ. ತನ್ನ ಬುದ್ಧಿ ಎಲ್ಲಿ ಹೋಗಿತ್ತು? ಆತನ ಮಾತಿಗೆ ಮರುಳಾಗಿದ್ದು ತನ್ನದೇ ತಪ್ಪು. ಯಾವ ಹುತ್ತದಲ್ಲಿ ಯಾವ ಹಾವೋ? ಇಷ್ಟು ವರುಷಗಳ ಒಡನಾಟದಿಂದ ಆತನ ಮನಸ್ಸನ್ನು ಅರಿಯಲಾಗದೆ ಹೋದದ್ದು ತನ್ನ ಮೂಢತನವಲ್ಲದೆ ಇನ್ನೇನು?

ಸುಜಾತಾ ತಕ್ಷಣ ಒಪ್ಪಿಕೊಂಡಳು. ಹೊಸ ಕಾಲೇಜಿಗೆ ಸೇರಿಕೊಂಡಳು. ಕಾಲೇಜು ಉಪನ್ಯಾಸಕಿ ಆಗುವುದು ಅವಳ ಬಹಳ ಹಿಂದಿನ ಕನಸಾಗಿತ್ತು. ಶಶಿಕಾಂತನ ನೆನಪು ಬರಲಾರದಷ್ಟು ಆಕೆ ಓದಿನಲ್ಲಿ ತನ್ನನ್ನು ತೊಡಗಿಸಿಕೊಂಡಳು. ಅವಳ ಭವಿಷ್ಯ ನಿಚ್ಚಳವಾಗಿ ಕಾಣಲಾರಂಭಿಸಿತು. 'ಮದುವೆ' ಅನ್ನುವುದು ತನ್ನ ಜೀವನದಲ್ಲಿ ಜರುಗಲೇಬೇಕಾದ ಅನಿವಾರ್ಯ ಕ್ರಿಯೆ ಎಂದು ಆಕೆಗೆ ಅನ್ನಿಸಲೇ ಇಲ್ಲ. ಹಾಗೆಂದು ಹೆತ್ತವರಿಗೆ ಸ್ಪಷ್ಟವಾಗಿ ತಿಳಿಸಿದಳು. ಅವರೂ ಒತ್ತಾಯಿಸಲಿಲ್ಲ. ಕಾಲಕ್ರಮೇಣ ಅಣ್ಣಂದಿರ ವಿವಾಹವಾಗಿ ಅವರು ದೂರ ಹೊರಟು ಹೋದರು. ಅಪ್ಪ ಅಮ್ಮನ ಕಾಲಾಂತರ ಸುಜಾತಾ ಊರಿಗೆ ಹೋಗುವುದನ್ನು ನಿಲ್ಲಿಸಿ ಬಿಟ್ಟಳು. ಸುಪ್ರಸಿದ್ಧ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಮೆಚ್ಚಿನ ಉಪನ್ಯಾಸಕಿಯಾದಳು.

ಈಗ ವೃತ್ತಿಯಿಂದ ನಿವೃತ್ತಳಾಗಿ ಈ ವೃದ್ಧಾಶ್ರಮ ಸೇರಿಕೊಂಡು ಇಲ್ಲಿಯ ಎಲ್ಲ ಚಟುವಟಿಕೆಗಳಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಕಾಲವನ್ನು ತಡೆಯಲು ಯಾರಿಗೆ ಸಾಧ್ಯ?

ಈಗ ಶಶಿಕಾಂತನ ಭೇಟಿ ಅವಳ ಶಾಂತವಾದ ಜೀವನದಲ್ಲಿ ದೊಡ್ಡ ಅಲೆ ಎಬ್ಬಿಸಿದೆ. ಈತ ಯಾಕೆ ಇಲ್ಲಿಗೆ ಬಂದ? ತಾನು ಇಲ್ಲಿರುವುದು ಅವನಿಗೆ ತಿಳಿದಿತ್ತೇ? ಅವನ ಮಡದಿ ಏನಾದಳು? ತನಗಾದರೆ ಯಾರೂ ಇಲ್ಲ. ಇರುವ ಅಣ್ಣಂದಿರು ಲೆಕ್ಕಕ್ಕಿಲ್ಲ. ಮಡದಿ ಮಕ್ಕಳಿದ್ದೂ ಇಲ್ಲಿಗೆ ಬರಬೇಕಾದ ಅನಿವಾರ್ಯತೆ ಈತನಿಗೆ ಹೇಗೆ ಬಂತು? ಹಲವು ವರುಷಗಳ ಬಳಿಕ ಮೊದಲ ಬಾರಿಗೆ ಇಬ್ಬರ ಕಣ್ಣುಗಳು ಸಂಧಿಸಿದಾಗ ಆತನೂ ತನ್ನಂತೆ ಗೊಂದಲಕ್ಕೊಳಗಾಗಿದ್ದ. ಅಂದ ಮೇಲೆ ತಾನು ಇಲ್ಲಿರುವುದು ಅವನಿಗೆ ತಿಳಿದಿರಲಾರದು. ತನ್ನ ದೌರ್ಭಾಗ್ಯಕ್ಕೆ ಹತ್ತಿರದ ಕಾಟೇಜೇ ಖಾಲಿ ಬೀಳಬೇಕೆ? ಇದನ್ನೇ ವಿಧಿ ಎನ್ನುವುದು.

ಆಗಲೇ ಮಧ್ಯಾಹ್ನ ಎರಡು ಗಂಟೆ. ಬೆಳಗ್ಗೆ ಚಾ ಕುಡಿದ ಬಳಿಕ ತಾನು ಏನನ್ನೂ ತಿನ್ನಲಿಲ್ಲ. ಮನೆಯಲ್ಲಂತೂ ಏನೂ ಮಾಡಿಲ್ಲ. ಹೊಟ್ಟೆ ಹಸಿಯತೊಡಗಿತು. ಎದ್ದು ಉಡುಪನ್ನು ಸರಿಪಡಿಸಿ ಮಾಸ್ಟರ್ ಕಿಚನ್‌ನತ್ತ ಹೆಜ್ಜೆ ಹಾಕಿದಳು. ಅಲ್ಲಿ ಕೈಗೆ ಸಿಕ್ಕಿದ್ದನ್ನು ತಿಂದುಕೊಂಡು ಮರಳಿ ಹಾಸಿಗೆಯಲ್ಲಿ ಬಿದ್ದುಕೊಂಡಳು.

ಸಾಯಂಕಾಲದ ಹೊತ್ತಿಗೆ ಶ್ರೀನಿವಾಸರಾಯರು ಮತ್ತು ಅವರ ಪತ್ನಿ ಆತಂಕಿತರಾಗಿ ಅವಳ ಬಳಿಗೆ ಬಂದರು. ಮಧ್ಯಾಹ್ನ ಹೊತ್ತು ಮೀರಿ ಮಾಸ್ಟರ್ ಕಿಚನ್‌ಗೆ ಬಂದು ಅಳಿದು ಉಳಿದು ಹೋದ ಏನನ್ನೋ ತಿಂದು ಹೋದ ಬಗ್ಗೆ ಅಡಿಗೆಯವರು ಅವರಿಗೆ ಹೇಳಿದ್ದರು. ಯಾವತ್ತೂ ಚಟುವಟಿಕೆಯಿಂದ ಓಡಾಡುತ್ತಿದ್ದ ಸುಜಾತಾಗೆ ಇಂದು 'ಮೈ ಸರಿ' ಇಲ್ಲ ಎನ್ನುವ ಸುದ್ದಿ ಆಶ್ರಮದಲ್ಲಿ ಆಗಲೇ ಹರಡಿತ್ತು. ಅವರನ್ನು ಹಿಂಬಾಲಿಸಿ ಇನ್ನೂ ಕೆಲವರು ಇವಳ ಕಾಟೇಜಿನತ್ತ ಧಾವಿಸಿ ಬಂದರು. ಬಾತುಹೋದ ಇವಳ ಮುಖ ಕಣ್ಣುಗಳು, ಅಸ್ತವ್ಯಸ್ತ ಉಡುಪು – ಮೊದಲ